ಪೊಲೀಸರು ಸಂಶಯಪಟ್ಟಿದ್ದಾರೆಂದು ಇತ್ತು ಎಂದರೆ ಸರಿಯಲ್ಲ. ನನ್ನ ತಂಗಿಯ ಮಗನಾದ ರುದ್ರಸ್ವಾಮಿಯ ಎದೆಯ ಮೇಲೆ ಐಶ್ವರ್ಯ ಮತ್ತು ಕೈನಲ್ಲಿ ವಾಣಿ ಎಂದು ಹಚ್ಚೆ ಗುರುತು ಹಾಕಿಸಿಕೊಂಡಿದ್ದನು ಎಂದರೆ ಸರಿಯಲ್ಲ. ವಿಜಯ ಕರ್ನಾಟಕ ಪೇಪರ್ ನಲ್ಲಿ ತಿಳಿಸಿದ ಅಪರಿಚಿತ ವ್ಯಕ್ತಿಯ ರುಂಡ ಮತ್ತು ಮುಂಡಗಳು ರುದ್ರಸ್ವಾಮಿಯದೇ ಇರಬಹುದೆಂದು ತಿಳಿದು ಕೂಡಲೇ ನಾನು ಕೆಂಗಟ್ಟೆಯ ಅಂಗನವಾಡಿಗೆ ಹೋಗಿ ಚಿಕ್ಕಮ್ಮಳಾದ ಚೆನ್ನಮ್ಮಳಿಗೆ ಪೇಪರ್ ತೋರಿಸಿ ವಿಚಾರ ತಿಳಿಸಿದೆನು ಎಂದರೆ ಸರಿಯಲ್ಲ. ನನ್ನ ತಂಗಿ ಚೆನ್ನಮ್ಮ ಶಿವಮೊಗ್ಗಕ್ಕೆ ಹೋಟೆಲ್ ಕೆಲಸಕ್ಕೆ ಹೋಗಿದ್ದು ಅವಳಿಗೂ ಫೋನ್ ಮಾಡಿ ವಿಚಾರ ತಿಳಿಸಿ ಮನೆಗೆ ಬರುವಂತೆ ತಿಳಿಸಿದೆನು ಎಂದರೆ ಸರಿಯಲ್ಲ. ನಾನು ಅಜ್ಜಂಪುರ ಪೊಲೀಸ್ ಠಾಣೆಗೆ ಫೋನ್ ಮಾಡಿ ವಿಚಾರಿಸಿದಾಗ ಪೊಲೀಸರು ಠಾಣೆಗೆ ಬರುವಂತೆ ತಿಳಿಸಿದರು ಎಂದರೆ ಸರಿಯಲ್ಲ. ನನ್ನ ತಂಗಿ ಚೆನ್ನಮ್ಮ ಕೆಂಗಟ್ಟೆಗೆ ಬಂದ ನಂತರ ನಾನು ನನ್ನ ತಂಗಿ ಚೆನ್ನಮ್ಮ, ನಮ್ಮ ಚಿಕ್ಕಮ್ಮಳಾದ ಚೆನ್ನಮ್ಮ ಮೂರು ಜನರು ಮರಬನಹಳ್ಳಿಗೆ ಹೋಗಿ ಮರಬನಹಳ್ಳಿಯ ರಾಜು ಎಂಬುವರ ಕಾರಿನಲ್ಲಿ ರಾತ್ರಿ ಸುಮಾರು 9.30 ಗಂಟೆಗೆ ಅಜ್ಜಂಪುರ ಪೊಲೀಸ್ ಠಾಣೆಗೆ ಹೋದೆವು ಎಂದರೆ ಸರಿಯಲ್ಲ. ಅಲ್ಲಿ ಪೊಲೀಸರು ನಮಗೆ ಪ್ರಕರಣದ ವಿಚಾರವನ್ನು ತಿಳಿಸಿ ಸೀಜ್ ಮಾಡಿದ್ದ ಕೆ ಎ 04 ಎಂ ಜೆ 3487 ಮಾರುತಿ ವ್ಯಾಗನಾರ್ ಕಾರನ್ನು ತೋರಿಸಿದರು ಎಂದರೆ ಸರಿಯಲ್ಲ. ಸದರಿ ಕಾರು ರುದ್ರಸ್ವಾಮಿಯದ್ದಾಗಿತ್ತು ಎಂದರೆ ಸರಿಯಲ್ಲ. ಪೊಲೀಸರು ರುಂಡವಿಲ್ಲದ ಮೃತ ದೇಹದ

